## ಸಂಪಾದಕೀಯ

# ಜಾಗತಿಕ ಮಾನವ

### ವಿಶ್ವಾಶ್ವತ್ಥ

ನಾವು ಆಹಾರದ ರುಚಿಯನ್ನು ಆಸ್ವಾದಿಸುತ್ತ ಊಟಮಾಡುತ್ತಿರುವಾಗ ಆಹಾರ ನಮಗೆ ಹೇಗೆ ಬಂತು ಎಂದು ಸಾಮಾನ್ಯವಾಗಿ ಆಲೋಚಿಸುವುದಕ್ಕೆ ಹೋಗುವುದಿಲ್ಲ. ರೈತರಿಂದ ಮತ್ತು ಬೀಜಗಳಿಂದ ಹಿಡಿದು ಎಷ್ಟೊಂದು ಜನ ಮತ್ತು ವಸ್ತುಗಳು, ಈ ಆಹಾರ ನಮ್ಮ ಕೈ ಸೇರುವ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದಾರೆ ಎಂಬುದನ್ನು ಶಾಂತಚಿತ್ತರಾಗಿ ಯೋಚಿಸಿದಾಗ, ನಾವು ಎಷ್ಟೊಂದು ಪರಾವಲಂಬಿಗಳು ಎಂದು ನಮಗೇ ಆಶ್ಚರ್ಯವಾಗುತ್ತದೆ. ನಾವು ಉಸಿರಾಡುವ ಗಾಳಿ, ನಮ್ಮ ಬಾಯಾರಿಕೆಯನ್ನು ನೀಗಿಸುವ ನೀರು, ನಮಗೆ ವಸ್ತುಗಳನ್ನು ತೋರಿಸುವ ಬೆಳಕು – ಇವೆಲ್ಲವೂ ಹಾಗೂ ಇನ್ನೂ ಅನೇಕ ವಸ್ತುಗಳು ನಮಗೆ ಬಾಹ್ಯಪ್ರಕೃತಿಯು ಕೊಟ್ಟ ವರಗಳಾಗಿವೆ. ಹಾಗೆಯೇ ನಮ್ಮ ಇಂದ್ರಿಯಗಳ ಮೂಲಕ ನಾವು ಗ್ರಹಿಸುವ ಸಂವೇದನೆಗಳು, ಬಾಹ್ಯಪ್ರಪಂಚಕ್ಕೆ ನಮ್ಮ ಮನಸ್ಸನ್ನು ತೆರೆದಿಡುವುದರ ಮೂಲಕ ನಾವು ಪಡೆಯುವ ವಿವಿಧ ಭಾವನೆಗಳು – ಇವೆಲ್ಲವೂ ನಮ್ಮ ಜೀವನಾಧಾರಗಳಾಗಿವೆ. ಪ್ರೀತಿ, ಸಹಾನುಭೂತಿ, ಮಾನ್ಯತೆ ಮತ್ತು ಇತರ ಭಾವನಾತ್ಮಕ ಅಂಶಗಳು ನಮ್ಮ ಜೀವನದಲ್ಲಿ ವಹಿಸುವ ಪಾತ್ರವನ್ನಂತೂ ನಾವು ಕಡೆಗಣಿಸುವಂತಿಲ್ಲ. ಆದರೆ, ಧರ್ಮ ಅಥವಾ ಅಲೌಕಿಕತೆಯ ದೃಷ್ಟಿಯನ್ನು ಮಾತ್ರ ಇಟ್ಟುಕೊಂಡು, ಮೇಲಿನ ಅಂಶಗಳನ್ನು ಗಮನಿಸದೆ, ಹೊರಜಗತ್ತನ್ನು ಅಲ್ಲಗಳೆದರೆ, ನಮ್ಮ ಜೀವನಾಧಾರಕ್ಕೆ ಆವಶ್ಯಕವಾದ ಸಂಗತಿಗಳನ್ನು ಕಡೆಗಣಿಸಿದಂತಹ ದ್ರೋಹವನ್ನು ನಾವು ಮಾಡಿದಂತಾಗುತ್ತದೆ.

> **ವಿಶ್ವವೇ, ನಿನ್ನೊಡನೆ ಸಮಶ್ರುತಿ ಪಡೆದಿರುವ ಸಮಸ್ತವೂ ನನ್ನೊಡನೆ ಕೂಡ ಪಡೆದಿಹುದು.**
>
> *– ಮಾರ್ಕಸ್ ಅರೆಲಿಸ್*

ಈ ಪ್ರಪಂಚವನ್ನು ಒಂದು ಹೆಮ್ಮರಕ್ಕೆ ಹೋಲಿಸಬಹುದು. ನಾವು ವಿಶ್ವಾಶ್ವತ್ಥದ ವಿವಿಧ ಭಾಗಗಳು. ಅದೇ ನಮ್ಮನ್ನು ಎಲ್ಲ ರೀತಿಯಲ್ಲಿಯೂ ಸಾಕಿ ಸಲಹುತ್ತಿದೆ. ಮರದ ಯಾವುದೇ ಭಾಗವೂ ಮುಖ್ಯ ಕಾಂಡದಿಂದ ಜೀವಸತ್ವವನ್ನು ಪಡೆಯದೆ ಉಳಿಯಲಾರದು. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ವ್ಯಕ್ತಿಯ ಜೀವನವು ಪೂರ್ಣದ ಜೀವನವನ್ನು ಅವಲಂಬಿಸಿದೆ, ವ್ಯಕ್ತಿಯ ಸುಖವು ಪೂರ್ಣದ ಸುಖವನ್ನು ಅವಲಂಬಿಸಿದೆ, ಪೂರ್ಣದಿಂದ ಹೊರತಾಗಿ ವ್ಯಕ್ತಿಯ ಅಸ್ತಿತ್ವವನ್ನು ಭಾವಿಸಲಾಗುವುದಿಲ್ಲ. ಇದೊಂದು ಶಾಶ್ವತ ಸತ್ಯ ಮತ್ತು ಇದರ ಶಿಲಾಸ್ತರದ ಮೇಲೆಯೇ ಇಡೀ ಜಗತ್ತು ನಿಂತಿರುವುದು. (ಕೃತಿಶ್ರೇಣಿ, ೫:೪೮೫)

### 'ಪೂರ್ಣಮಿದಂ'

ಭೌತಿಕ ವಿಜ್ಞಾನವು ಕೂಡ ವಿಶ್ವದ ಏಕತೆಯನ್ನು ನಿಸ್ಸಂದೇಹವಾಗಿ ಪ್ರತಿಪಾದಿಸುತ್ತಿದೆ. ಯಾವ ಭಾಗವೂ ಇನ್ನೊಂದರಿಂದ ಸ್ವತಂತ್ರವಾಗಿಲ್ಲ, ಯಾವುದನ್ನೂ ಇತರ ಎಲ್ಲ ವಸ್ತುಗಳಿಂದ ಸಂಪೂರ್ಣವಾಗಿ ಪ್ರತ್ಯೇಕಿಸಲಾಗುವುದಿಲ್ಲ. ನಮ್ಮ ದೇಹವು ಭೌತಿಕ ಜಗತ್ತಿನ ಅವಿಭಾಜ್ಯ ಅಂಗ– ಸ್ವಾಮಿ ವಿವೇಕಾನಂದರು ಹೇಳುವಂತೆ, ಭೌತಸಾಗರದ ಒಂದು ಕಿರುದೆರೆ. ನಮ್ಮ ಮನಸ್ಸೂ ವಿಶ್ವಮನಸ್ಸಿನ ಅವಿಭಾಜ್ಯ ಅಂಗ; ಹಾಗಿಲ್ಲದಿದ್ದರೆ ಮನುಷ್ಯ ಮನುಷ್ಯರ ನಡುವೆ ಯಾವುದೇ ಆಲೋಚನಾ ಸಂವಹನವೂ ಸಾಧ್ಯವಾಗುತ್ತಿರಲಿಲ್ಲ. ಆಧ್ಯಾತ್ಮಿಕವಾಗಿಯಂತೂ ನಾವೆಲ್ಲರೂ ವಿಶ್ವಾತ್ಮದೊಡನೆ ಒಂದಾಗಿದ್ದೇವೆ. ಆದ್ದರಿಂದ ಎಲ್ಲ ರೀತಿಯಲ್ಲೂ, ಎಲ್ಲ ಹಂತದಲ್ಲೂ ನಾವು ಪೂರ್ಣತೆಯ ಅವಿಭಾಜ್ಯ ಅಂಗ. ಹೀಗಾಗಿ ನಮ್ಮ ಪ್ರತ್ಯೇಕ ಅಸ್ತಿತ್ವ, ನಮ್ಮ ವೈಯಕ್ತಿಕತೆ – ಇವೆಲ್ಲವೂ ಕೇವಲ ಮಿಥ್ಯಾ ಕಲ್ಪನೆಗಳು ಮಾತ್ರ.

ಮಾನವಜೀವನವು ವಿಶಾಲವಾದ ವಿಶ್ವ ರಚನೆಯ ಒಂದು ಭಾಗ. ಪರಿಸರವಿಜ್ಞಾನ ಅಥವಾ ಜೀವರಸಾಯನಶಾಸ್ತ್ರದ ಅಧ್ಯಯನದ ಮೂಲಕ ಜೀವನದ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ನಾವು ಪ್ರಯತ್ನಿಸಿದರೆ, ಅದರಲ್ಲಿ ಒಂದು ನಿರಂತರತೆ ಇದೆಯೆಂದು ನಮಗೆ ಗೊತ್ತಾಗುತ್ತದೆ. ಜೀವನವು ಜಾಗತಿಕವಾದುದೆಂದೂ ವ್ಯಕ್ತಿಯು ಅದರ ಕೇವಲ ಒಂದು ತೋರಿಕೆಯ ಕೇಂದ್ರವೆಂದೂ ತಿಳಿದುಬರುತ್ತದೆ. ಸಸ್ಯಗಳಲ್ಲಿ ಕಂಡುಬರುವ ದ್ಯುತಿಸಂಶ್ಲೇಷಣ ಕ್ರಿಯೆ (Photosynthesis) ಮತ್ತು ಜೀವಕೋಶ ಉಸಿರಾಟಗಳ ಅಧ್ಯಯನದಿಂದ, ನಮ್ಮ ದೇಹದ ಪ್ರತಿಯೊಂದು ಇಂಗಾಲದ ಅಣು ಮತ್ತು ನಾವು ಉಸಿರಾಡುವ ಪ್ರತಿಯೊಂದು ಆಮ್ಲಜನಕ ಕಣವೂ, ಗಿಡಗಳ ಹಸಿರು ಅಂಗಾಂಶಗಳ ಮೂಲಕ ಬಂದಿರುವುದೆಂಬ ಸತ್ಯ ನಮಗೆ ತಿಳಿದುಬರುತ್ತದೆ. ಅದಲ್ಲದೆ, ಸೂರ್ಯನ ಬೆಳಕೇ ನಮ್ಮೆಲ್ಲ ಜೀವಶಕ್ತಿಯ ಮೂಲ; ಆದ್ದರಿಂದ ನಮ್ಮ ದೇಹರಚನೆ ಮತ್ತು ಕ್ರಿಯೆಗಳಿಗೂ ಕೂಡ ಒಂದು ಜಾಗತಿಕ ಆಯಾಮವಿದೆ. ಜೀವನವು ಪರಸ್ಪರ ಸಂಬಂಧವುಳ್ಳದ್ದು, ಪರಸ್ಪರ ಆಲಂಬನವುಳ್ಳದ್ದು – ಈ ಎಲ್ಲ ವಿಷಯಗಳು ನಮಗೆ ವೇದ್ಯವಾಗುತ್ತವೆ.

### ಸಾಮಾಜಿಕ ಏಕತೆ

ನಾವು ಸಾಮಾನ್ಯವಾಗಿ ನಮ್ಮ ವ್ಯಕ್ತಿತ್ವವನ್ನು ದೇಹ, ಇಂದ್ರಿಯ ಮತ್ತು ಮನಸ್ಸುಗಳಿಗೆ ಮಾತ್ರ ಸೀಮಿತಗೊಳಿಸುತ್ತೇವೆ ಹಾಗೂ

**ಈ ಭೂಮವೇ(ದೊಡ್ಡದಾದುದು) ಕೆಳಗಿದೆ, ಅದೇ ಮೇಲಿದೆ, ಹಿಂದಿದೆ, ಮುಂದಿದೆ, ಬಲಕ್ಕಿದೆ, ಎಡಕ್ಕಿದೆ, ಅದೇ ಇದೆಲ್ಲ ಆಗಿದೆ. *ನಾನೇ ಇದೆಲ್ಲವೂ ಆಗಿರುವೆನು*. ಆದ್ದರಿಂದ ನಾನೇ ಕೆಳಗಿರುವೆನು, ಮೇಲಿರುವೆನು, ಹಿಂದಿರುವೆನು, ಮುಂದಿರುವೆನು ಬಲಕ್ಕಿರುವೆನು, ಎಡಕ್ಕಿರುವೆನು.**

**– *ಛಾಂದೋಗ್ಯ ಉಪನಿಷತ್ತು* (೭.೨೫.೧)**

**ಒಬ್ಬ, ಇಬ್ಬರು ಎನ್ನುವುದಕ್ಕೆ, ನೀನು ಯಾವಾಗ ತಾನೇ ಎರಡಾಗಿದ್ದೆ? ಈ ವಿಶ್ವವು ಪವಿತ್ರನಾದ ಅವನೇ ಆಗಿದ್ದಾನೆ, ಅವನು ಮಾತ್ರವೇ ಆಗಿದ್ದಾನೆ. –*ಸ್ವಾಮಿ ವಿವೇಕಾನಂದ***

ಇವುಗಳ ಹೊರಗಿರುವುದೆಲ್ಲ ನಮಗಿಂತ ಬೇರೆಯದೆಂದು ಭಾವಿಸುತ್ತೇವೆ. ಆದರೆ, ನಿಜವಾಗಿಯೂ ನಾವಿರುವ ಸಾಮಾಜಿಕ ಪರಿಸರದಿಂದ ಪ್ರತ್ಯೇಕವಾದ ಅಸ್ತಿತ್ವ ನಮಗೆ ಇಲ್ಲವೇ ಇಲ್ಲ. ನಮ್ಮ ವ್ಯಕ್ತಿತ್ವದ ಸಾಮಾಜಿಕ ಆಯಾಮವನ್ನು ಕಡೆಗಣಿಸಿ ನಮ್ಮನ್ನು ಮಾತ್ರ ನಾವು ಪರಿಗಣನೆಗೆ ತಂದು ಕೊಂಡು, ಆ ಮೂಲಕ ನಮ್ಮನ್ನು ನಾವೇ ನೋಯಿಸಿ ಕೊಳ್ಳುತ್ತೇವೆ. ನಮ್ಮ ಸುಖವನ್ನೇ ನಾವು ಪ್ರಧಾನವಾಗಿ ಪರಿಗಣಿಸುವುದರಿಂದ ದುಃಖವನ್ನೇ ಹೆಚ್ಚಿಸಿಕೊಳ್ಳುತ್ತೇವೆ. ನಮ್ಮ ದೇಹವನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ, ಅದಕ್ಕೆ ಉಣಿಸುತ್ತೇವೆ. ಸ್ನಾನ ಮಾಡಿಸುತ್ತೇವೆ, ಬಟ್ಟೆ ತೊಡಿಸುತ್ತೇವೆ ಮತ್ತು ಅದನ್ನು ಆರೋಗ್ಯವಂತವಾಗಿ ಇಟ್ಟುಕೊಳ್ಳಲು ಪ್ರಯತ್ನಿಸುತ್ತೇವೆ. ಇದೇ ರೀತಿ ಸಮಾಜವನ್ನೂ ಆರೋಗ್ಯವಂತವಾಗಿ ಇರಿಸಲು ನಾವು ಪ್ರಯತ್ನಿಸಬೇಕು. ಅದು ನಿಜವಾಗಿಯೂ ನಮ್ಮ ವ್ಯಕ್ತಿತ್ವದ ಒಂದು ವಿಸ್ತರಣೆಯೇ ಆಗಿದೆ. ಸಮಾಜ ಅನಾರೋಗ್ಯವಾಗಿದ್ದರೆ 'ನಾನು' ಆರೋಗ್ಯವಂತವಾಗಿರಲು ಹೇಗೆ ತಾನೆ ಸಾಧ್ಯ?

ನಮ್ಮ ದೇಹದ ಯಾವುದೇ ಪ್ರತ್ಯೇಕ ಅಂಗದ ಆರೋಗ್ಯವು ದೇಹದ ಒಟ್ಟು ಆರೋಗ್ಯವನ್ನು ಅವಲಂಬಿಸಿರುತ್ತದೆ. ನಾವು ಕೈಗಳಿಂದ ಕೆಲಸಮಾಡುವುದರಿಂದ ಅವುಗಳು ಮಾತ್ರ ಗಟ್ಟಿ ಮುಟ್ಟಾಗಿದ್ದರೆ ಸಾಕೆಂದು ಭಾವಿಸಿದರೆ ಆಗದು. ಒಂದು ವೇಳೆ ಅದು ಸಾಧ್ಯವಾದರೂ ಅದೊಂದು ಅಸ್ವಾಭಾವಿಕ ಸ್ಥಿತಿ. ಹಾಗೆಯೇ ಸಮಾಜದ ಯಾವುದೋ ಒಂದು ಭಾಗವು ಆರೋಗ್ಯವಂತವಾಗಿದ್ದು, ಉಳಿದೆಲ್ಲ ಭಾಗವೂ ರೋಗರುಜಿನ ಗಳಿಂದ, ಬಡತನ, ಅಸಮಾನತೆ, ಶೋಷಣೆ, ಹಿಂಸೆ ಇತ್ಯಾದಿ ಗಳಿಂದ ನರಳುತ್ತಿದ್ದರೆ ಅದೊಂದು ಅಸ್ವಾಭಾವಿಕ ಸ್ಥಿತಿ. ನಾವು ಆರೋಗ್ಯವಂತರಾಗಿರಬೇಕಾದರೆ, ನಮ್ಮ ಆರೋಗ್ಯದ ಸ್ಥಿತಿ ಯನ್ನು ನಾವು ನಿಜವಾಗಿಯೂ ಅನುಭವಿಸಬೇಕಾದರೆ, ಇಡೀ ಸಮಾಜದ ಆರೋಗ್ಯದ ಕಡೆಗೂ ನಾವು ಗಮನ ಕೊಡಬೇಕು.

ಒಂದು ಘಟಕದ ಎಲ್ಲ ಭಾಗಗಳೂ ಸಾಮರಸ್ಯದಿಂದ ಹೊಂದಾಣಿಕೆಯಿಂದ ಕೆಲಸ ಮಾಡುವುದೇ ಆರೋಗ್ಯವಂತ ಸ್ಥಿತಿ. ದೇಹದಲ್ಲಿ ಇಂತಹ ಸನ್ನಿವೇಶ ಇರುವವರೆಗೆ ಅದು ಆರೋಗ್ಯವಂತವಾಗಿರುತ್ತದೆ. ಒಂದು ಕುಟುಂಬ ಅಥವಾ ಸಂಸ್ಥೆಯಲ್ಲಿ ಇಂತಹ ಸನ್ನಿವೇಶವಿದ್ದರೆ ಅದು ಆರೋಗ್ಯವಂತ ಕುಟುಂಬ. ಹಾಗೆಯೇ ಸಮಾಜದಲ್ಲಿ ಇಂತಹ ಸನ್ನಿವೇಶ ಸೃಷ್ಟಿ ಯಾದರೆ ಅದು ಆರೋಗ್ಯವಂತ ಸಮಾಜ.

### ಮೂರು ರೀತಿಯ ಭಾವಗಳು

ನಮ್ಮ ವ್ಯಕ್ತಿತ್ವದ ಸಾಮಾಜಿಕ ಆಯಾಮವನ್ನೂ ಅದರ ಮೂಲಕ ಜಾಗತಿಕ ಆಯಾಮವನ್ನೂ ನಾವು ಸಂಪೂರ್ಣವಾಗಿ ಅರ್ಥಮಾಡಿ ಕೊಂಡಾಗ ಮಾತ್ರ ನಮ್ಮ ವೈಯಕ್ತಿಕ ಜವಾಬ್ದಾರಿಯ ಪ್ರಜ್ಞೆ ನಮ್ಮಲ್ಲಿ ಬೆಳೆಯುತ್ತದೆ. ಈ ಪ್ರಜ್ಞೆಯು ನಮ್ಮನ್ನು ಎಲ್ಲ ರೀತಿಯ ಹಾನಿಕಾರಕ ಚಟುವಟಿಕೆಗಳಿಂದ ದೂರವಿರಿಸುತ್ತದೆ. ನಾವು ಮೂರು ರೀತಿಯ ಭಾವಗಳನ್ನು ರೂಢಿಸಿಕೊಳ್ಳಬೇಕು. **ವ್ಯಕ್ತಿಭಾವ, ರಾಷ್ಟ್ರಭಾವ ಮತ್ತು ವಿಶ್ವಭಾವ**. ನಮ್ಮದೇ ವ್ಯಕ್ತಿವೈಶಿಷ್ಟ್ಯವನ್ನು ಉಳಿಸಿಕೊಂಡು, ಇತರರ ಅಂಧಾನುಕರಣೆಯಿಲ್ಲದೆ, ಪರಾವಲಂಬನೆಯಿಲ್ಲದೆ ಸ್ವತಂತ್ರ ಪ್ರಜ್ಞೆ ಯಿಂದ ಬಾಳುವುದು **ವ್ಯಕ್ತಿಭಾವ**. ನಮ್ಮ ರಾಷ್ಟ್ರ, ಧರ್ಮ ಮತ್ತು ಸಂಸ್ಕೃತಿಯೊಡನೆ ಭಾವಪೂರ್ಣ ತಾದಾತ್ಮ್ಯವನ್ನು ಹೊಂದಿರುವುದು **ರಾಷ್ಟ್ರಭಾವ**. ಇದು ಸಾಧ್ಯವಾಗುವುದು ವ್ಯಕ್ತಿಭಾವದಲ್ಲಿ ನಾವು ಸ್ಥಿರವಾಗಿ ನೆಲೆನಿಂತಾಗಲೇ. ಮುಂದಿನ ಘಟ್ಟದಲ್ಲಿ, ಉದಾತ್ತ ರಾಷ್ಟ್ರ ಭಾವದೊಂದಿಗೆ **ವಿಶ್ವಭಾವವು** ಕೂಡ ನಮ್ಮಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ.

ಒಂದು ಮರವು ಚೆನ್ನಾಗಿ ಬೇರು ಬಿಟ್ಟಾಗ ಅದು ಸುತ್ತಲಿನ ಸಾರವನ್ನು ಹೀರಿಕೊಂಡು ದೊಡ್ಡದಾಗಿಯೂ ವಿಸ್ತಾರವಾಗಿಯೂ ಬೆಳೆಯುತ್ತದೆ. ಹಾಗೆಯೇ ನಾವು ಕೂಡ ನಮ್ಮ ವ್ಯಕ್ತಿತ್ವದ ಆಳದಲ್ಲಿ ಸ್ಥಿರವಾಗಿ ಬೇರೂರಬೇಕು. ಆಗ ಮಾತ್ರ ನಮ್ಮ ವ್ಯಕ್ತಿತ್ವ ಸುತ್ತಲಿನ ಸಂಸ್ಕೃತಿಯ ಸಾರವನ್ನು ಹೀರಿಕೊಂಡು, ಬೆಳೆದು, ಜಾಗತಿಕ ವಿಸ್ತರಣೆ ಯನ್ನು ಪಡೆಯುತ್ತದೆ. ಮರವು ಸರಿಯಾಗಿ ಬೇರೂರದಿದ್ದರೆ ಅದರ ಸುತ್ತಮುತ್ತಲೂ ಕಳೆ ಬೆಳೆದುಕೊಂಡು ಮರದ ಬೆಳವಣಿಗೆ ಕುಂಠಿತವಾಗುತ್ತದೆ. ಅದೇ ರೀತಿ, ನಮ್ಮ ವ್ಯಕ್ತಿತ್ವದ ನೆಲೆಯಲ್ಲಿ ನಾವು ಸರಿಯಾಗಿ ನೆಲೆಯೂರದಿದ್ದರೆ, ಇನ್ನೊಬ್ಬರ ಅನುಕರಣೆ ಯೆಂಬ ಕಳೆಯೇ ಹುಲುಸಾಗಿ ಬೆಳೆದು, ನಮ್ಮ ವ್ಯಕ್ತಿತ್ವದ ಸಾಮಾಜಿಕ ವಿಸ್ತರಣೆಯಾಗಲಿ, ಜಾಗತಿಕ ವಿಸ್ತರಣೆಯಾಗಲಿ ಅಸಾಧ್ಯವಾಗುತ್ತದೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಅನುಕರಣೆ ಎನ್ನುವುದು ಆತ್ಯಂತಿಕ ಅವನತಿಯ ಚಿಹ್ನೆ ಎಂದು ಖಂಡಿಸುತ್ತಿದ್ದರು. ಅನು ಕರಣೆಯು ನಮ್ಮ ವ್ಯಕ್ತಿತ್ವದ ಜಾಗತಿಕ ಆಯಾಮವನ್ನು ಮರೆಸಿ ಬಿಡುತ್ತದೆ. ಆದ್ದರಿಂದ ನಾವು ಯಾವುದೇ ಒಂದು ನಿರ್ದಿಷ್ಟ ವಾದುದನ್ನು ಅನುಕರಿಸದೆ **ಎಲ್ಲವೂ** ಆಗಲು ಹಂಬಲಿಸಬೇಕು.

### ವ್ಯಕ್ತಿತ್ವದ ಜಾಗತಿಕ ಆಯಾಮಕ್ಕೆ ಅಡ್ಡಿಯಾಗಿರುವ ಗೋಡೆಗಳು

ಮೇಲೆ ಹೇಳಿದಂತೆ, ನಮ್ಮ ವ್ಯಕ್ತಿತ್ವದ ಜಾಗತಿಕ ಆಯಾಮವನ್ನು ಮರೆತು ಅನೇಕ ರೀತಿಯ ಮಾನಸಿಕ ಮತ್ತು ಭಾವನಾತ್ಮಕ ಗೋಡೆಗಳ ಮೂಲಕ ನಮ್ಮನ್ನು ನಾವು ಪ್ರತ್ಯೇಕಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ನಾವು ಎಲ್ಲವನ್ನು ಕೆಡವುತ್ತೇವೆ, ನಾಶಮಾಡುತ್ತೇವೆ; ಆದರೆ ಈ ಸ್ವಯಂಕಲ್ಪಿತ ಗೋಡೆಗಳನ್ನು ಮಾತ್ರ ಕೆಡವಲು ಇಷ್ಟಪಡುವುದಿಲ್ಲ. ಉದಾಹರಣೆಗೆ, ಪೂರ್ವಪಶ್ಚಿಮ ದೇಶಗಳ ನಡುವೆ ಸಾಂಸ್ಕೃತಿಕವಾದ ಗೋಡೆಯೊಂದನ್ನು ಹಾಕಿಕೊಂಡು **"ಪೂರ್ವವೇ ಬೇರೆ, ಪಶ್ಚಿಮವೇ**

ಬೇರೆ"ಎನ್ನುತ್ತೇವೆ. ಆದರೆ ಸ್ವಾಮಿ ವಿವೇಕಾನಂದರು ಸಮುದ್ರಗಳಾಚೆಯಿರುವ ನಮ್ಮ ನೆರೆಯವರು, ಅತಿದೂರ ಇರುವವರೂ ಕೂಡ, ನಮ್ಮ ರಕ್ತಬಾಂಧವರು. ಬಣ್ಣ, ಭಾಷೆ, ಆಚಾರ ಇತ್ಯಾದಿಗಳಲ್ಲಿ ಸ್ವಲ್ಪ ವ್ಯತ್ಯಾಸವಿರಬಹುದು ಅಷ್ಟೆ ಎಂಬುದನ್ನು ನಿರ್ಣಾಯಕವಾಗಿ ಪ್ರಮಾಣೀಕರಿಸಿರುವರು (Swami Vivekananda in the West, New Discoveries, Part II, Advaita Ashrama, Kolkata PP.೩೩-೩೪). ಕ್ಯಾಥೊಲಿಕ್ ದೈವಶಾಸ್ತ್ರಜ್ಞರೊಬ್ಬರು ಹೀಗೆ ಹೇಳುತ್ತಾರೆ: " ಪ್ರತಿಯೊಬ್ಬ ಮಾನವನಲ್ಲಿಯೂ ಪೂರ್ವಪಶ್ಚಿಮಗಳೆರಡೂ ಇವೆ– ಇದು ಯಾವುದೇ ಒಬ್ಬ ವ್ಯಕ್ತಿಯಲ್ಲಿ ಸ್ತ್ರೀ ಮತ್ತು ಪುರುಷ ಲಕ್ಷಣಗಳೆರಡೂ ಇರುವಂತೆಯೇ (ಇದೂ ಕೂಡ ಸಹಜವಾದುದು ಮತ್ತು ಪ್ರಕೃತಿದತ್ತವಾದುದು)." ನಮ್ಮ ಮಿದುಳಿನಲ್ಲಿಯೂ ಪಾಶ್ಚಾತ್ಯ ಮತ್ತು ಪೌರಸ್ತ್ಯ ಭಾಗಗಳೆರಡೂ ಇರುತ್ತವೆಯೆಂದು ಆಧುನಿಕ ಜೀವವಿಜ್ಞಾನಿಗಳು ಹೇಳುತ್ತಾರೆ.

ರಾಷ್ಟ್ರೀಯ ಗೋಡೆಗಳನ್ನು ಕಲ್ಪಿಸಿಕೊಂಡು ಜನರು ರಾಷ್ಟ್ರ ರಾಷ್ಟ್ರಗಳನ್ನು ಪ್ರತ್ಯೇಕಿಸುತ್ತಾರೆ. ತಾವೆಲ್ಲರೂ ಒಂದೇ ವಿಶ್ವ ಕುಟುಂಬಕ್ಕೆ ಸೇರಿದವರೆಂಬುದನ್ನು ಮರೆತು ತಮ್ಮ ತಮ್ಮ ರಾಷ್ಟ್ರಾಭಿಮಾನದಿಂದ ಹೊಡೆದಾಡುತ್ತಾರೆ. ಟೀಲ್‌ಹಾರ್ಡ್ ಡೆ ಚಾರ್ಡಿನ್ ಎಂಬ ಚಿಂತಕರು ಹೇಳುತ್ತಾರೆ: "ಈಗ ರಾಷ್ಟ್ರಗಳ ಯುಗ ಮುಗಿದು ಹೋಗಿದೆ. ಹಳೆಯ ಪೂರ್ವಾಗ್ರಹಗಳನ್ನು ಮರೆತು ಜನರು ಒಬ್ಬ ವ್ಯಕ್ತಿಯಂತೆ ವಿಶ್ವವನ್ನು ಕಟ್ಟುವ ಸಮಯ ಸನ್ನಿಹಿತವಾಗಿದೆ." ಆರ್ನಾಲ್ಡ್ ಟಾಯ್ನ್‌ಬಿ ರಾಷ್ಟ್ರೀಯ ಭಾವನೆಯನ್ನು ಹೀಗೆ ಅತ್ಯಂತ ಕಟುವಾಗಿ ಟೀಕಿಸುತ್ತಾರೆ: "ರಾಷ್ಟ್ರೀಯ ಭಾವನೆ ಎಂಬುದು ಬುಡಕಟ್ಟು ಮನೋಭಾವವೆಂಬ ಹಳೆಯ ಶೀಶೆಯಲ್ಲಿರುವ ಪ್ರಜಾಪ್ರಭುತ್ವವೆಂಬ ಹೊಸ ಮದ್ಯದ ಹುಳಿಯ ಬುರುಗು ಮಾತ್ರ. "

ಅನಂತರ ಬರುವುದು ಧಾರ್ಮಿಕ ಗೋಡೆಗಳು. ಇವೇ ಎಲ್ಲ ಮತೀಯ ದ್ವೇಷ ಮತ್ತು ಕಲಹಗಳ ಉಗಮಸ್ಥಾನ. ಇದು "ಭೂಮಿಯನ್ನು ಹಿಂಸೆಯಿಂದ ತುಂಬಿದೆ, ಅದನ್ನು ಮಾನವ ರಕ್ತದಿಂದ ತೋಯಿಸಿದೆ, ಅನೇಕ ನಾಗರಿಕತೆಗಳನ್ನೂ ಧ್ವಂಸಗೊಳಿಸಿದೆ ಮತ್ತು ರಾಷ್ಟ್ರಗಳನ್ನು ದುಃಖದುಮ್ಮಾನಕ್ಕೆ ಈಡು ಮಾಡಿದೆ." (ಕೃತಿಶ್ರೇಣಿ, ೧:೬) ಇಡೀ ಮಾನವಕೋಟಿ ಒಂದೇ ಸೂರಿನಡಿ ಬರುವಂತಹ ಒಂದು ಜಾಗತಿಕ ಧರ್ಮದ ಕಲ್ಪನೆ ಸ್ವಾಮಿ ವಿವೇಕಾನಂದರದಾಗಿತ್ತು. ಅವರು ಹೇಳುತ್ತಾರೆ: "ನಾವು ಯಾರನ್ನೂ ತಿರಸ್ಕರಿಸುವುದಿಲ್ಲ. ದೈವೋಪಾಸಕನನ್ನಾಗಲಿ, ಏಕಸತ್ತಾವಾದಿಯನ್ನಾಗಲಿ, ಅಜ್ಞೇಯತಾವಾದಿಯನ್ನಾಗಲಿ, ನಾಸ್ತಿಕನನ್ನಾಗಲಿ ಯಾರನ್ನೂ ದೂರವಿರಿಸುವುದಿಲ್ಲ. ಅಂತಹ ಒಬ್ಬ ಧರ್ಮಾನುಯಾಯಿಗೆ ಇರಬೇಕಾದ ಒಂದೇ ಅರ್ಹತೆಯೆಂದರೆ ಅವನ ಚಾರಿತ್ರ್ಯವು ವಿಶಾಲವೂ ಗಭೀರವೂ ಆಗಿರಬೇಕು, ಅಷ್ಟೆ" (ಕೃತಿಶ್ರೇಣಿ, ೪:೧೯೯) ಸ್ವಾಮಿ ವಿವೇಕಾನಂದರ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದ ಅಮೇರಿಕೆಯ ಭಕ್ತೆ ದಿವಂಗತ ಮೇರಿ ಲೂಯಿಸ್ ಬರ್ಕ್ ಹೀಗೆ ಹೇಳುತ್ತಾರೆ:

> **ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ** –*ಡುಮಾಸ್*
>
> **ಈ ಎಲ್ಲ ಅಸ್ತಿತ್ವವನ್ನು ಒಂದೇ ನಿಯಮ ಆಳುತ್ತಿರುವುದು. ಅದು ಚೈತನ್ಯಾತ್ಮಕವಾದುದಲ್ಲ, ಚೈತನ್ಯವೇ.** – *ಎಮರ್‌ಸನ್*
>
> **ಯಾವುದರ ದೇಹ, ದೇವ ಮತ್ತು ಆತ್ಮವಾಗಿದೆಯೋ ಆ ಮಹಾ ಸಮಗ್ರತೆಯ ಅಂಗಗಳೇ ಈ ಎಲ್ಲವೂ.** – *ಅಲೆಕ್ಸಾಂಡರ್ ಪೋಪ್*
>
> **ನೀನು ಹೂವೊಂದನ್ನು ಕದಲಿಸಿದರೆ, ತಾರೆಯೊಂದನ್ನು ಕದಲಿಸಿದಂತೆ.** –*ಫ್ರಾನ್ಸಿಸ್ ಥಾಮ್ಸನ್*

"ವೇದಾಂತವು (ಇಂದಿನಂತೆ) ಹಿಂದೆಂದೂ ಕೂಡ ಜಗತ್ತಿನ ಎಲ್ಲ ನಂಬಿಕೆಗಳನ್ನೂ, ಮಾನವನ ಎಲ್ಲ ಉದಾತ್ತ ಪ್ರಯತ್ನಗಳನ್ನೂ ಒಳಗೊಳ್ಳುವ ತತ್ತ್ವ ಮತ್ತು ಧರ್ಮವಾಗಿ ವಿಶಾಲಗೊಂಡಿರಲಿಲ್ಲ. ಸ್ವಾಮಿ ವಿವೇಕಾನಂದರ ಈ ವಿಶಾಲ ವೇದಾಂತವು ಆಧ್ಯಾತ್ಮಿಕತೆ ಮತ್ತು ಲೌಕಿಕ ಪ್ರಗತಿಗಳನ್ನೂ, ಶ್ರದ್ಧೆ ಮತ್ತು ವಿಚಾರಗಳನ್ನೂ, ವಿಜ್ಞಾನ ಮತ್ತು ಅನುಭಾವಗಳನ್ನೂ, ಕರ್ಮ ಮತ್ತು ಧ್ಯಾನಗಳನ್ನೂ, ಮಾನವಸೇವೆ ಮತ್ತು ಭಗವದಾರಾಧನೆಗಳನ್ನೂ ಸಮನ್ವಯಗೊಳಿಸುತ್ತದೆ."

ಆದರೆ, ವಿಚಾರವಂತರು ಮತ್ತು ಸ್ವಾಮಿ ವಿವೇಕಾನಂದರಂತಹ ಆಧ್ಯಾತ್ಮಿಕ ಮುಂದಾಳುಗಳು ಎಷ್ಟೇ ಪ್ರಯತ್ನಗಳನ್ನು ಮಾಡಿದರೂ ಇಂದಿಗೂ ಮತೀಯ ಗೋಡೆಗಳು ಗಟ್ಟಿಯಾಗಿಯೇ ಉಳಿದಿವೆ. ಅಂತಿಮ ಸತ್ಯವೇನೆಂದರೆ ಮನುಷ್ಯ ತನ್ನ ವೈಯಕ್ತಿಕತೆಯನ್ನು ಕಳೆದುಕೊಂಡು ಜಾಗತಿಕ ಸಮೂಹದೊಡನೆ ಒಂದಾಗಲು ಇಷ್ಟಪಡುವುದಿಲ್ಲ. ಅವನು ಧಾರ್ಮಿಕ ನಂಬಿಕೆ, ರಾಷ್ಟ್ರೀಯತೆ, ಸಂಸ್ಕೃತಿ, ಭಾಷೆ, ಅಧಿಕಾರ, ಸ್ಥಾನಮಾನ ಇತ್ಯಾದಿ ಯಾವುದಾದರೊಂದನ್ನು ಗಟ್ಟಿಯಾಗಿ ಹಿಡಿದುಕೊಂಡು ಅದರ ಮೂಲಕ ತನ್ನ ವೈಯಕ್ತಿಕತೆಯನ್ನು ಉಳಿಸಿಕೊಳ್ಳಲು ಶತಾಯಗತಾಯ ಪ್ರಯತ್ನಿಸುತ್ತಾನೆ. ಆಧುನಿಕ ಸಂಪರ್ಕಮಾಧ್ಯಮ ಮತ್ತು ಮಾಹಿತಿ ತಂತ್ರಜ್ಞಾನಗಳ ದೆಸೆಯಿಂದ ಸಂಸ್ಕೃತಿ, ರಾಷ್ಟ್ರ, ಜನಾಂಗ ಇವುಗಳು ಹತ್ತಿರವಾಗುತ್ತಿವೆ ಎಂದು ನಾವು ಆಗಾಗ ಹೇಳುತ್ತೇವೆ. ಆದರೆ ಅವುಗಳು, ಜನರ ನಡುವೆ ದ್ವೇಷ ಮತ್ತು ಶತ್ರುಭಾವನೆಗಳನ್ನು ಹರಡುವುದರಲ್ಲಿಯೂ ಯಶಸ್ವಿಯಾಗುತ್ತಿವೆ ಎನ್ನುವುದೇ ಒಂದು ವಿಪರ್ಯಾಸ. ವಿಚಿತ್ರವೇನೆಂದರೆ ದೂರ ಕಡಿಮೆಯಾದಷ್ಟೂ ವೈಯಕ್ತಿಕ ಭಾವವಿನಿಮಯದ ಅಂತರ ಜಾಸ್ತಿಯಾಗುತ್ತಿದೆ. ಭೌತಿಕ ಸಂಪರ್ಕಗಳು ಅಧಿಕವಾದಷ್ಟೂ ಮನುಷ್ಯರ ನಡುವಿನ ಹಾರ್ದಿಕ ಸಂಪರ್ಕ ಕಡಿಮೆಯಾಗುತ್ತಿದೆ. ನಾವು ಮೊಬೈಲ್ ಫೋನ್, ಈಮೇಲ್ ಇತ್ಯಾದಿ ಮಾಧ್ಯಮಗಳ ಮೂಲಕ ಇತರರನ್ನು ಸಂಪರ್ಕಿಸುತ್ತೇವೆಯೇ ಹೊರತು ಪ್ರೀತಿಯ ಮಾಧ್ಯಮದ ಮೂಲಕವಲ್ಲ. **ನಾವು ಜಗತ್ತನ್ನೆಲ್ಲ ಸುತ್ತಿಬಂದರೂ ನಿಜವಾದ ಅರ್ಥದಲ್ಲಿ ಜನರನ್ನು ಸಂಧಿಸುವುದೇ ಇಲ್ಲ. ನಾವು ಎಷ್ಟೇ ಕೈಕುಲುಕಿದರೂ ನಮ್ಮ ಹೃದಯ ಕಲಕುವುದೇ ಇಲ್ಲ. ನಾವು ಇತರ ಜನಗಳ ಹತ್ತಿರ ಎಷ್ಟೇ ಸುಳಿದಾಡಿದರೂ ನಮ್ಮ ಸ್ವಾರ್ಥದಿಂದ ದೂರವಾಗುವುದೇ ಇಲ್ಲ.**

### ವೈವಿಧ್ಯತೆಯಲ್ಲಿ ಏಕತೆ

ಮಾನವನು ತನ್ನ ಸಂಸ್ಕೃತಿ ಅಥವಾ ಜನಾಂಗದೊಡನೆ ತಾದಾತ್ಮ್ಯವನ್ನು ಹೊಂದಿರುತ್ತಾನೆ. ಜಾಗತೀಕರಣದ ಮೂಲಕ ಈ ತಾದಾತ್ಮ್ಯವನ್ನು ಕಳೆದುಕೊಳ್ಳುವ ಭಯ ಅವನಿಗಿರುತ್ತದೆ. ತನ್ನತನವನ್ನು ಮತ್ತು ತನ್ನ ಈ ಬಗೆಯ ತಾದಾತ್ಮ್ಯವನ್ನು ಬಿಟ್ಟುಕೊಡದೆ ಅವನು ಜಾಗತಿಕ ವ್ಯಕ್ತಿಯಾಗಲು ಸಾಧ್ಯವಾದರೆ ಮಾತ್ರ, ಅಂತಹ ಜಾಗತೀಕರಣವನ್ನು ಅವನು ಸ್ವಾಗತಿಸುತ್ತಾನೆ. ಅದಿಲ್ಲದಿದ್ದರೆ, ತನ್ನ ವೈಯಕ್ತಿಕತೆಯನ್ನು ಕಳೆದುಕೊಂಡು ಬಿಡುವ ಅವನ ಆತಂಕವು ಆಕ್ರಮಣಕಾರಿ ಮನೋಭಾವಕ್ಕೆ ಕಾರಣವಾಗಿ ಕ್ಲೇಶ, ಕಲಹಗಳು ಅಧಿಕವಾಗುತ್ತವೆ. ಆದ್ದರಿಂದ ವ್ಯಕ್ತಿಗತ ವೈವಿಧ್ಯವನ್ನು ಉಳಿಸಿಕೊಂಡೇ ನಾವು ಜಾಗತಿಕ ಏಕತೆಯನ್ನು ಸಾಧಿಸಬೇಕಾಗಿದೆ. ವರ್ಣವೈವಿಧ್ಯವೇ ಚಿತ್ರಕ್ಕೆ ಒಂದು ಅವರ್ಣನೀಯವಾದ ಸೌಂದರ್ಯವನ್ನು ನೀಡುವುದು, ಸ್ವರವೈವಿಧ್ಯದಿಂದಲೇ ಸುಶ್ರಾವ್ಯ ಸಂಗೀತ ಸಾಧ್ಯ; ವಿವಿಧ ಭಾವಗಳ ಸಮ್ಮೇಳನದಿಂದಲೇ ಒಳ್ಳೆಯ ಸಾಹಿತ್ಯ ನಿರ್ಮಾಣವಾಗುತ್ತದೆ. ಹಾಗೆಯೇ ಶಿಕ್ಷಣ, ಸಂಸ್ಕೃತಿ, ಜ್ಞಾನ, ಪ್ರತಿಭೆ ಇತ್ಯಾದಿ ವೈವಿಧ್ಯಮಯ ಅಂಶಗಳು ಮಾನವನ ವ್ಯಕ್ತಿತ್ವವನ್ನು ಸುಂದರಗೊಳಿಸುತ್ತವೆ. ಅದೇ ರೀತಿ, ಸಮಾಜವೂ ಕೂಡ ವೈವಿಧ್ಯಮಯ ವರ್ಗ, ಭಾಷೆ, ಸಂಸ್ಕೃತಿ, ಜಾತಿ, ಧರ್ಮಗಳಿಂದ ಕೂಡಿರುತ್ತದೆ. ಈ ಬಗೆಯ ವೈವಿಧ್ಯತೆ ಇಲ್ಲದಿದ್ದರೆ ಜನಜೀವನ ನೀರಸವಾಗುತ್ತದೆ, ಅದು ತನ್ನ ಸೊಬಗನ್ನು ಕಳೆದುಕೊಳ್ಳುತ್ತದೆ. ಹಾಗಾದ ಪಕ್ಷದಲ್ಲಿ ನಾವೆಲ್ಲರೂ ಒಂದೇ ಬಗೆಯಲ್ಲಿ ಆಲೋಚಿಸುತ್ತ, ಸ್ವಾಮಿ ವಿವೇಕಾನಂದರು ಹೇಳುವಂತೆ, ಈಜಿಪ್ಟಿನ ಮಮ್ಮಿಗಳಂತಾಗಿ (ಸಂಸ್ಕರಿಸಿದ ಶವಗಳು) ಬಿಡುತ್ತೇವೆ. ಆದರೆ ಈ ವೈವಿಧ್ಯತೆಯು ನಿಷೇಧಾತ್ಮಕ ಪರಿಣಾಮಗಳಿಂದ ಮುಕ್ತವಾಗಿ, ವ್ಯಕ್ತಿ ಮತ್ತು ಸಮಾಜದ ಬೆಳವಣಿಗೆಗೆ ಪೂರಕವಾಗಬೇಕು. ಹಾಗಾಗಬೇಕಾದರೆ, ವಿವಿಧ ಹೂವುಗಳು ಕೂಡಿಕೊಂಡ ಒಂದು ಮಾಲೆಯ ಹಿಂದೆ ಸಮಾನ ಅಂಶವಾಗಿ ಒಂದು ದಾರವಿರುವಂತೆ, ಮೇಲುನೋಟಕ್ಕೆ ಕಾಣಬರುವ ವೈವಿಧ್ಯತೆಯ ಹಿಂದೆ ಏಕತೆಯ ಒಂದು ಸೂತ್ರವಿರಬೇಕು. ಅದು ಹೇಗೆಂದರೆ, ಸುಮ್ಮನೆ ವಿವಿಧ ರೀತಿಯ ಬಣ್ಣಗಳನ್ನು ಕ್ಯಾನ್‌ವಾಸಿನ ಮೇಲೆ ಬಳಿದರೆ ಅದು ಚಿತ್ರವಾಗುವುದಿಲ್ಲ, ಅದರ ಹಿಂದೆ ಮೂಲಭೂತವಾದ ಭಾವನಾವಸ್ತು ಇರಬೇಕು. ವಿವಿಧ ಸ್ವರಗಳ ಸಮ್ಮೇಳನದಿಂದಲೇ ಸಂಗೀತವಾಗುವುದಿಲ್ಲ, ಅವುಗಳ ಹಿಂದೆ ಏಕತೆಯ ಶ್ರುತಿ ಇರಬೇಕು. ಹಾಗೆಯೇ ಮೂಲಭೂತವಾದ ಒಂದು ಒಗ್ಗೂಡಿಸುವ ಅಂಶ, ಒಂದು ಜಾಗತಿಕ ದೃಷ್ಟಿ ಅಥವಾ ಮನೋಭಾವ ಇಲ್ಲದಿದ್ದರೆ ವೈವಿಧ್ಯತೆ ಎನ್ನುವುದು ವೈರುಧ್ಯತೆಗೆ (ಪರಸ್ಪರ ವಿರೋಧ ಭಾವನೆ) ಕಾರಣವಾಗುತ್ತದೆ ಮಾತ್ರವಲ್ಲ, ಅರಾಜಕತೆಯಲ್ಲಿ ಪರ್ಯವಸಾನಗೊಳ್ಳುವ ಅಪಾಯವನ್ನೂ ಹೊಂದಿರುತ್ತದೆ.

ಕೇವಲ ಸಂಪರ್ಕವ್ಯವಸ್ಥೆಯಾಗಲಿ, ಮಾಹಿತಿ ಕ್ರಾಂತಿಯಾಗಲಿ, ಜಾಗತಿಕ ಅರ್ಥವ್ಯವಸ್ಥೆಯಾಗಲಿ ಈ ಮೂಲಭೂತ ಏಕತೆಯನ್ನು ನಮಗೆ ತಂದುಕೊಡುವುದಿಲ್ಲ, ವಿವಿಧ ವರ್ಗಗಳನ್ನು ಬೆಸೆಯುವುದಿಲ್ಲ. ಅದಕ್ಕಾಗಿ ಮಾನವನು ತನ್ನ ಜೈವಿಕ ಪರಿಮಿತಿಯನ್ನು ಮೀರಿ ಬೆಳೆದು ನಿಂತು, ತನ್ನನ್ನು ತಾನು ಚೈತನ್ಯದೊಂದಿಗೆ ಒಂದಾಗಿಸಿಕೊಳ್ಳಬೇಕು – ತಾನು ಚೈತನ್ಯದೊಂದಿಗೆ ಒಂದಾಗಬೇಕು – ತಾನು ಚೈತನ್ಯ ಎಂದು ತಿಳಿಯಬೇಕು ಮತ್ತು ತನ್ನಂತೆಯೇ ಎಲ್ಲರೂ ಚೈತನ್ಯಸ್ವರೂಪರೆಂದು ಅರಿಯಬೇಕು. ಏಕೆಂದರೆ, ಚೈತನ್ಯವೇ ಎಲ್ಲ ಜೀವಿಗಳಲ್ಲೂ ಇರುವ ಮೂಲಭೂತ ಏಕತೆಯ ಅಂಶವಾಗಿದೆ. ಸ್ವಾಮಿ ವಿವೇಕಾನಂದರು ಹೇಳುವ ಹಾಗೆ, ನಾವೆಲ್ಲರೂ ಅಮೃತಪುತ್ರರು ಎಂದು ಭಾವಿಸಬೇಕು. ಆಗ ನಮ್ಮ ನಮ್ಮ ವ್ಯಕ್ತಿವೈಶಿಷ್ಟ್ಯಗಳನ್ನು ಬಿಟ್ಟುಕೊಡದೆ, ಜನಾಂಗೀಯ ಅಥವಾ ಮತೀಯ ವೈಶಿಷ್ಟ್ಯಗಳನ್ನೂ ಕಳೆದುಕೊಳ್ಳದೆ, ನಾವೆಲ್ಲರೂ ಒಂದಾಗಲು ಸಾಧ್ಯ.

ಈ ವಿಷಯದಲ್ಲಿ ಶ್ರೀರಾಮಕೃಷ್ಣರು ನಮಗೆ ಆದರ್ಶವಾಗಬಲ್ಲರು. ಅವರು ತಮ್ಮ ಸಂಪ್ರದಾಯ ಮತ್ತು ಧರ್ಮದಲ್ಲಿ ಬಲವಾಗಿ ಬೇರು ಬಿಟ್ಟಿದ್ದರು; ತಮ್ಮ ಜೀವನ ಮತ್ತು ಸಾಧನೆಗಳಲ್ಲಿ ಕಟ್ಟಾ ಹಿಂದುವಾಗಿದ್ದರು. ಆದರೆ ಅವರ ಮನೋಭಾವ ಎಷ್ಟು ವಿಶಾಲವಾಗಿತ್ತೆಂದರೆ ಅವರು ಎಲ್ಲ ಸಾಂಸ್ಕೃತಿಕ ಮತ್ತು ಧಾರ್ಮಿಕ ಎಲ್ಲೆಗಳನ್ನೂ ಮೀರಿ ನಿಂತಿದ್ದರು. ಈ ವಿಷಯವಾಗಿ, ಆಲ್ಬಿನ್ ಆರ್. ಗಿಲ್ಬರ್ಟ್ ಎಂಬುವವರು ಶ್ರೀರಾಮಕೃಷ್ಣರ ಬಗ್ಗೆ ಹೀಗೆ ಹೇಳುತ್ತಾರೆ: "ತಾವು ಯಾವ ಸಂಸ್ಕೃತಿಯ ಭಾಗವಾಗಿ ಜನಿಸಿದರೋ ಅದರ ಪರಿಧಿಯನ್ನು ಮೀರಿಹೋಗಿ, ಬಹಳ ಎತ್ತರಕ್ಕೆ ಏರಿದ ಅತ್ಯಂತ ಕೆಲವೇ ಮಂದಿ ಆಧ್ಯಾತ್ಮಿಕ ಮಹಾಪುರುಷರಲ್ಲಿ ಶ್ರೀರಾಮಕೃಷ್ಣರೂ ಒಬ್ಬರು ಎಂದು ನನಗೆನಿಸುತ್ತದೆ. ಅವರು ಕೆಳಮಟ್ಟದ ಗಿರಿಶಿಖರಗಳಿಂದ ನೋಡಿದಾಗ ಕಾಣುವ, ಕಣ್ಣಿಗೆಟುಕದ ದೃಶ್ಯಗಳನ್ನು ವೀಕ್ಷಿಸುತ್ತಿರುವ, ಏಕೈಕ ಮಹೋನ್ನತ ಪರ್ವತಶಿಖರದಂತಿರುವರು." ಹೀಗೆ ಅನುಕರಣೀಯರಾದ ಆದರ್ಶ ಜಾಗತಿಕ ವ್ಯಕ್ತಿಯಾಗಿ ಶ್ರೀರಾಮಕೃಷ್ಣರು ಹೊರಹೊಮ್ಮುತ್ತಾರೆ. ಅವರ ಜೀವನ ಮತ್ತು ಸಂದೇಶಗಳಿಂದ ನಾವು ಕಲಿಯಬಹುದಾದ ಪಾಠವೇನೆಂದರೆ, ನಾವು ಮಾನವನನ್ನು ಜಾಗತಿಕಗೊಳಿಸಬೇಕೇನೋ ನಿಜ. ಆದರೆ, ಅದನ್ನು ಸಾಧಿಸುವುದು ಮಾನವಸಹಜ ವೈಶಿಷ್ಟ್ಯಗಳನ್ನು ಅಳಿಸುವುದರ ಮೂಲಕವಲ್ಲ, ಬದಲಾಗಿ ಅವುಗಳನ್ನು ಮೀರಿ ಮಾನವನು ಬೆಳೆಯುವಂತೆ ಮಾಡುವುದರ ಮೂಲಕ. ■

> ವೇದಾಂತವಾದರೋ, ದೇವರಲ್ಲದ ವಸ್ತು ಮತ್ತಾವುದೂ ಇಲ್ಲ ಎನ್ನುತ್ತದೆ. ಜೀವಂತನಾಗಿರುವ ದೇವರು ನಿಮ್ಮಲ್ಲಿರುವನು. ಆದರೂ ಕೆಲಸಕ್ಕೆ ಬಾರದ ಕಟ್ಟುಕಥೆ ನಂಬಿ ಚರ್ಚು ಗುಡಿ ಇವನ್ನು ಕಟ್ಟುತ್ತಿರುವಿರಿ. ಮನುಜದೇಹದಲ್ಲಿರುವ ಜೀವಾತ್ಮವೊಂದೆ ನಾವು ಪೂಜಿಸಬೇಕಾದ ವಸ್ತು. ಎಲ್ಲ ಪ್ರಾಣಿಗಳ ದೇಹವೂ ಕೂಡ ದೇವರ ಗುಡಿಯೇನೊ ಹೌದು. ಆದರೆ ಮಾನವನದು ಅತ್ಯುತ್ತಮವಾದುದು, ಕಟ್ಟಡಗಳಲ್ಲಿ ತಾಜ್‌ಮಹಲ್ ಇದ್ದಂತೆ. ಅದರಲ್ಲಿ ನನಗೆ ಪೂಜಿಸಲು ಆಗದೆ ಇದ್ದರೆ ಉಳಿದ ಎಂತಹ ದೇವಸ್ಥಾನಗಳಿಂದಲೂ ಪ್ರಯೋಜನವಿಲ್ಲ.
>
> –ಸ್ವಾಮಿ ವಿವೇಕಾನಂದ (ಕೃ.ಶ್ರೀ.೨.೨೬೮)